

## ದೊಡ್ಡರಂಗೇಗೌಡ

‘ಸಾಹಿತ್ಯ’ದ ಮಾಧ್ಯಮವೇ ಬೇರೆ, ಸಿನಿಮಾ ‘ಮಾಧ್ಯಮವೇ ಬೇರೆ’, ‘ಸಾಹಿತ್ಯ’ ಒಬ್ಬ ಸೃಜನಶೀಲ ಸಾಹಿತಿಯಿಂದ ಮುಕ್ತವಾಗಿ ಪ್ರತಿಭಾತ್ಮಕವಾಗಿ ತನಗೆ ತಾನೇ ಸ್ಫೂರ್ತಿ ಬಂದಾಗ ಉಕ್ಕಿ ಬರುವಂಥಾದ್ದು. ‘ಸಿನಿಮಾ’ ಕಲೆ ಮತ್ತು ವಿಜ್ಞಾನಗಳ ಸಂಮಿಶ್ರಣ. ಸಾಹಿತ್ಯ ಏಕ ಕರ್ತೃಕ, ಸಿನಿಮಾ ಹಾಗಲ್ಲ. ಸಾಮೂಹಿಕ ನಿರ್ಮಾಣ! ಅನೇಕ ಜನ ಪ್ರತಿಭಾವಂತರ ತಂಡ ಒಟ್ಟಾಗಿ ಒಂದು ವಿಷಯ ಆಲೋಚಿಸಿ, ಆಶಯಕ್ಕೆ ಅನುಗುಣವಾಗಿ ವಿನ್ಯಾಸ ಸಿದ್ಧಪಡಿಸಿ, ತಂತ್ರಜ್ಞಾನವನ್ನೂ ಅಳವಡಿಸಿ ಅನೇಕ ಕುಶಲ ಕರ್ಮಿಗಳು ಮಾಡಿದ ಕಲಾ ಪ್ರಪೂರ್ಣ ಅಡುಗೆ! ಸಾಹಿತ್ಯ ಹಾಗಲ್ಲವೇ ಅಲ್ಲ… ಒಬ್ಬ ವ್ಯಕ್ತಿಯ ಆಲೋಚನೆ, ಭಾವನೆ, ವಿಷಯದ ಅನುಸಂಧಾನದಿಂದ ಮೂಡಿದ ಚಿಂತನಶೀಲ ಅಭಿವ್ಯಕ್ತಿ.

ಸಿನಿಮಾ ತಯಾರಿಕೆಯ ಹಿನ್ನಲೆಯಲ್ಲಿ ಅನೇಕಾನೇಕ ತಂತ್ರಜ್ಞರು ಕೆಲಸ ಮಾಡುತ್ತಾರೆ. ಅಲ್ಲಿ ಗೀತ ರಚನಕಾರ ಒಬ್ಬ ನೇಪಥ್ಯದಲ್ಲಿ ಕಾರ್ಯನಿರ್ವಹಿಸುವ ಕಲೆಗಾರ, ಕತೆಯ ಅರಿವಿರುತ್ತೆ, ಸನ್ನಿವೇಶದ ಅರಿವಿರುತ್ತೆ. ಪಾತ್ರಗಳ ಅರಿವಿರುತ್ತೆ, ಎಲ್ಲವನ್ನೂ ಗ್ರಹಿಸಿ ತನ್ನ ಕಲ್ಪನೆಯನ್ನು ಬೆರೆಸಿ ಸಾಹಿತ್ಯ ಸಂಗೀತಾನುಭವಗಳಿಂದ ಎರಕ ಹೊಯ್ಯುತ್ತಾನೆ.

ಬಹುತೇಕ ಸಿನಿಮಾಗಳು ದಿಢೀರ್ ನಿರ್ಮಾಣಗಳು! ಹೀಗಾಗಿ ಸಾಹಿತಿಯ ಸಾಹಿತ್ಯಕ ಬರಹವೂ ಸಂಗೀತ ನಿರ್ದೇಶಕನ ತತ್‌ಕ್ಷಣದ ಸ್ವರ ಪ್ರಸ್ತಾರಗಳಂತೆ ಅವಸರದ ಹೆರಿಗೆ! ನಾಳೆ ಮಾಡುವ ಮಾತಿಲ್ಲ. ಇಂದೇ! ಈಗಲೇ! ನಿರ್ಮಾಪಕನ ಬಳಿ ದುಡ್ಡಿರುವಾಗಲೇ! (ಎಲ್ಲರೂ ಹಾಗಲ್ಲ ನಿಜ, ಕೆಲವರು ಅಪವಾದ ಇರಬಹುದು. ಅವರಿಗೆ ಪ್ಲಾನಿಂಗ್‌ನಲ್ಲಿ ನಂಬಿಕೆ. ಸಿನಿಮಾ ತಯಾರಿಕೆ ಒಂದು ಕಲಾತ್ಮಕ ಅಭಿವ್ಯಕ್ತಿಯ ಮಹಾನ್ ಯೋಜನೆ. ಅವರು ಅನೇಕ ದಿನ ಕಂಡ ಕನಸುಗಳ ಫಲ ಈ ತಯಾರಿಕೆ. ಹೀಗಾಗಿ ಎಲ್ಲವೂ ಸಮರ್ಪಕವಾಗಿರಬೇಕೆಂಬ ಮಹತ್ವಾಕಾಂಕ್ಷೆ ಅವರಿಗೆ. ಅಂಥವರು ಕನ್ನಡದಲ್ಲಿ ಪುಟ್ಟಣ್ಣ ಕಣಗಾಲ್, ಸಿದ್ಧಲಿಂಗಯ್ಯ, ದೊರೆ ಭಗವಾನ್, ಹುಣಸೂರು ಕೃಷ್ಣಮೂರ್ತಿ, ಭಾರ್ಗವ, ಕೆ.ವಿ. ಜಯರಾಮ್ ಮುಂತಾದ ಹಿರಿಯ ನಿರ್ದೇಶಕರುಗಳು– ಉಳಿದವರನ್ನು ಇಲ್ಲಿ ಗಂಭೀರವಾಗಿ ಚರ್ಚಿಸಲಾಗದು).

ಈಗಾಗಲೇ ಮಹಾಕವಿಗಳ, ಆಧುನಿಕ ಕವಿಗಳ, ಹೊಸ ಕವಿಗಳ ಪ್ರಕಟಿತ